**ಕರ್ನಾಟಕ ಸರ್ಕಾರ**

**67ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ**

**ಎಸ್.ಸಿ.ನಂ.1969/2022**

**ಪ್ರಮಾಣ ವಚನ ಬೋಧಿಸಲಾಯಿತು.**
**ದಿನಾಂಕಃ 03/08/2026**
**ಪಿಡಬ್ಲ್ಯೂಃ 01 ಸಿಡಬ್ಲ್ಯೂಃ 15**

| | | |
|---|---|---|
| ಹೆಸರು | ಃ | ಎಂ.ಎಸ್.ಬೋಲಾತಿನ್ |
| ತಂದೆಯ ಹೆಸರು | ಃ | ಸಿದ್ದಪ್ಪ |
| ವಯಸ್ಸು | ಃ | 48 ವರ್ಷ |
| ಉದ್ಯೋಗ | ಃ | ಪಿ.ಐ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| ವಾಸ | ಃ | ಆಡುಗೋಡಿ, ಬೆಂಗಳೂರು |

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

ದಿಃ03/10/2018 ರಿಂದ 19/10/2019 ರವರೆಗೆ ನಾನು ಸುದ್ದಗುಂಟೆಪಾಳ್ಯ ಪೊಲೀಸ್ ಠಾಣೆಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ19/01/2019 ರಂದು ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಚಾಸಾ1 ರವರು ಠಾಣೆಗೆ ಬಂದು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊ.ನಂ.16/2019 ರಲ್ಲಿ ಪ್ರಕರಣ ದಾಖಲು ಮಾಡಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ. ದೂರನ್ನು **ನಿ.ಪಿ.1** ಎಂದು ಸಾಕ್ಷಿ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು **ನಿ.ಪಿ.2** ಎಂದು ಸಾಕ್ಷಿ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ2 ಮತ್ತು 3 ರವರನ್ನು ಕರೆದುಕೊಂಡು ಚಾಸಾ1 ರವರು ತೋರಿಸಿದ ಕೃತ್ಯ ನಡೆದ ಸ್ಥಳ ಬಿಟಿಎಂ 1 ನೇ ಹಂತ, ಕೆಇಬಿ ಲೇಔಟ್, 3 ನೇ ಮುಖ್ಯ ರಸ್ತೆಯಲ್ಲಿ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 8.00 ರಿಂದ 9.00 ರವರೆಗೆ ಜರುಗಿಸಿರುತ್ತೇನೆ. ಸ್ಥಳ ಪಂಚನಾಮೆಯನ್ನು **ನಿ.ಪಿ.3**

ಎಂದು ಸಾಕ್ಷಿ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿಗಳ ಪತ್ತೆ ಗಾಗಿ ಸಿಬ್ಬಂದಿಗಳನ್ನು ನೇಮಿಸಿರುತ್ತೇನೆ.

ದಿಃ05/02/2019 ರಂದು ಸಂಜೆ 5.30 ಗಂಟೆಗೆ ಚಾಸಾ14 ರವರು ಚಾಸಾ8 ರಿಂದ 13 ರವರನ್ನು ಕರೆದುಕೊಂಡು 4 ಜನ ಆರೋಪಿಗಳು ಮತ್ತು ಅವರು ಉಪಯೋಗಿಸಿದ ಆಟೋ ರೀಕ್ಷಾ ನಂ.ಕೆಎ 05 ಎಬಿ9038 ಸಮೇತ ಠಾಣೆಗೆ ಬಂದು ನನ್ನ ಮುಂದೆ ಹಾಜರು ಪಡಿಸಿ ಚಾಸಾ14 ರವರು ವರದಿಯನ್ನು ನೀಡಿರುತ್ತಾರೆ. ವರದಿಯನ್ನು **ನಿ.ಪಿ.4** ಎಂದು ಸಾಕ್ಷಿ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ನಂತರ ಪಂಚರಾದ ಚಾಸಾ4 ಮತ್ತು 5 ರವರನ್ನು ಠಾಣೆಗೆ ಕರೆಸಿ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದಂತ ಆಟೋ ರೀಕ್ಷಾ ಮತ್ತು 1 ನೇ ಆರೋಪಿ ಬಳಿ ಇದ್ದ ಚಾಕು ಮತ್ತು 3 ನೇ ಆರೋಪಿಯಿಂದ ಒಂದು ಮೊಬೈಲ್ ಫೋನ್ ಪಂಚರ ಸಮಕ್ಷಮ ಸಂಜೆ 6.30-7.30 ರವರೆಗೆ ಅಮಾನತ್ತು ಪಂಚನಾಮೆ ಮುಖಾಂತರ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅಮಾನತ್ತು ಪಂಚನಾಮೆಯನ್ನು **ನಿ.ಪಿ.5** ಎಂದು ಸಾಕ್ಷಿ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು.

ನಂತರ ಸದರಿ ವಸ್ತುಗಳನ್ನು ಪಿ.ಎಫ್.9/2019 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪಿ.ಎಫ್. ಅನ್ನು **ನಿ.ಪಿ.6** ಎಂದು ಸಾಕ್ಷಿ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿತರ ಸ್ವಇಚ್ಛಾ ಹೇಳಿಕೆಯನ್ನು ಹಾಗೂ ಚಾಸಾ8 ರಿಂದ 13 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿಃ06/02/2019 ರಂದು ಪಂಚರಾದ ಚಾಸಾ4 ಮತ್ತು 5 ರವರನ್ನು ಬರಮಾಡಿಕೊಂಡು 3 ನೇ ಆರೋಪಿಯು ಕರೆದುಕೊಂಡು ಹೋದ ಬಿಸ್ಮಿಲ್ಲಾ ನಗರ, ತವರೆಕೆರೆ ಪಾರ್ಕ್ ಬಳಿ ಕೃತ್ಯಕ್ಕೆ ಉಪಯೋಗಿಸಿದ್ದ ಸುಜುಕಿ ಆಕ್ಸಿಸ್ ದ್ವಿಚಕ್ರ ವಾಹನ ಕೆಎ 05 ಹೆಚ್.ವಿ 4338 ಅನ್ನು ತೋರಿಸಿದ್ದು ಅದನ್ನು ಪರಿಶೀಲಿಸಿದಾಗ ಅದರ ಸೀಟಿನ ಕೆಳಗಡೆ ಒಂದು ಪ್ಲಾಸ್ಟಿಕ್ ಹಿಡಿಕೆಯ ಚಾಕು

ಸಿಕ್ಕಿರುತ್ತದೆ ಅದನ್ನು ಬೆಳಿಗ್ಗೆ 10.00-10.45 ರವರೆಗೆ ಅಮಾನತ್ತು ಪಂಚನಾಮೆ ಮುಖಾಂತರ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅಮಾನತ್ತು ಪಂಚನಾಮೆಯನ್ನು **ನಿ.ಪಿ.7** ಎಂದು ಸಾಕ್ಷಿ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. 3 ನೇ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತನ್ನ ಜೊತೆ ಬಂದರೆ ಚಾಕು ಮತ್ತು ದ್ವಿಚಕ್ರ ವಾಹನವನ್ನು ತೋರಿಸುತ್ತೇನೆ ಎಂದು ಹೇಳಿರುವ ಸ್ವಇಚ್ಛಾ ಹೇಳಿಕೆಯ ಭಾಗವನ್ನು **ನಿ.ಪಿ.8** ಎಂದು ಸಾಕ್ಷಿ ಸಹಿಯನ್ನು ನಿ.ಪಿ.8(ಎ) ಎಂದು ಆರೋಪಿಯ ಸಹಿಯನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು. ನಂತರ ಸದರಿ ವಸ್ತುಗಳನ್ನು ಪಿ.ಎಫ್.10/2019 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪಿ.ಎಫ್. ಅನ್ನು **ನಿ.ಪಿ.9** ಎಂದು ಸಾಕ್ಷಿ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಚಾಸಾ1 ರವರನ್ನು ಠಾಣೆಗೆ ಕರೆಸಿ ಆರೋಪಿತರನ್ನು ಗುರುತಿಸುವ ಬಗ್ಗೆ ಮರು ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಪಂಚರಾದ ಚಾಸಾ4 ಮತ್ತು 5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿಃ05/02/2019 ರಂದು ಚಾಸಾ1 ರವರ ಗಾಯದ ಪ್ರಮಾಣ ಪತ್ರವನ್ನು ಕೋರಿ ವಿಕ್ಟೋರಿಯ ಆಸ್ಪತ್ರೆಗೆ ಮನವಿಯನ್ನು ಸಲ್ಲಿಸಿದ್ದೇನೆ. ಚಾಸಾ1 ರವರು ವೈದ್ಯಕೀಯ ಸಲಹೆ ವಿರುದ್ಧವಾಗಿ ಬಿಡುಗಡೆಯಾಗಿದ್ದರಿಂದ ಗಾಯಾದ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ ಆದರೆ ಅದಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ಪಡೆದಿರುತ್ತೇನೆ. ವಿಕ್ಟೋರಿಯ ಆಸ್ಪತ್ರೆಯ ಹೊರರೋಗಿ ಪುಸ್ತಕವನ್ನು **ನಿ.ಪಿ.10** ಎಂದು ಸಾಕ್ಷಿ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ಅನುಮತಿ ಮೇರೆಗೆ ಸೀಲ್ ಆದ ವಸ್ತುವನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅವುಗಳನ್ನು ಗುರುತಿಸಿರುತ್ತಾರೆ.

ಪಿಂಕ್ ಬಣ್ಣದ ಪ್ಲಾಸ್ಟಿಕ್ ಫೋಲ್ಡಿಂಗ್ ಸ್ಟಿಕರ್ ಕಟರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ಮು.ಮಾ.1** ಎಂದು ಗುರುತಿಸಲಾಯಿತು.

ಒಂದು ಮೊಬೈಲ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ಮು.ಮಾ.2** ಎಂದು ಗುರುತಿಸಲಾಯಿತು.

ಹಸಿರು ಹಿಡಿಕೆ ಇರುವ ಚಾಕು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ಮು.ಮಾ.3** ಎಂದು ಗುರುತಿಸಲಾಯಿತು.

ಆರೋಪಿತರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣ ಪತ್ರವನ್ನು ದಿಃ14/02/2019 ರಂದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. (2 ನೇ ಆರೋಪಿಯು ಗೈರು ಹಾಜರಿದ್ದು ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ ಆರೋಪಿಯ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. )

(ವಾಹನಗಳನ್ನು ಬಿಡುಗಡೆ ಮಾಡಲಾಗಿದ್ದು ಕಡತದಲ್ಲಿ ವಾಹನಗಳ ಭಾವಚಿತ್ರ ಇಲ್ಲದೆ ಇರುವುದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)**

**ಓ. ಹೇ. ಕೇ. ಸರಿ ಇದೆ.**

***(ರಶ್ಮಿ.ಎಂ)***
***67* ನೇ ಅಪರ ನಗರ ಸಿವಿಲ್**
**ಮತ್ತು ಸೆಷನ್ಸ್ ನ್ಯಾಯಾಧೀಶರು**
***(ಸಿಸಿಹೆಚ್-68),* ಬೆಂಗಳೂರು**